# ಕರ್ನಾಟಕ ಪಬ್ಲಿಕ್ ಶಾಲೆ, ಹೊಸಯಳನಾಡು , ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ- ಯಶೋಗಾಥೆ




1952ನೇ ಇಸವಿಯಲ್ಲಿ ಪ್ರಾರಂಭವಾದ ಈ ಶಾಲೆ ಮೊದಲಿಗೆ 4 ಶಾಲಾ ಕೊಠಡಿಗಳಿಂದ ಪ್ರಾರಂಭವಾಗಿದ್ದು ಹಂತ ಹಂತವಾಗಿ ದಾನಿಗಳ ಸಹಕಾರದಿಂದ 30 ಕೊಠಡಿಗಳು ಆಗಿದ್ದು ಪ್ರಾಥಮಿಕ ವಿಭಾಗ ಪ್ರೌಢಶಾಲಾ ವಿಭಾಗ ಕಾಲೇಜು ವಿಭಾಗಗಳಿಂದ ಪ್ರಸ್ತುತ 950 ವಿದ್ಯಾರ್ಥಿಗಳು ದಾಖಲಾತಿಯಾಗಿರಯತ್ತಾರೆ. 2012 ರಿಂದ 2014ನೇ ಸಾಲಿನಲ್ಲಿ ಶ್ರೀಯುತ ನಾ ತಿಪ್ಪೇಸ್ವಾಮಿ ಅದೇ ಗ್ರಾಮದ ಹಿರಿಯ ವಿದ್ಯಾರ್ಥಿ ಹಾಗೂ ದಾನಿಗಳು /ಎಸ್.ಡಿ.ಎಂ.ಸಿ./ಪೋಷಕರು ಹಾಗೂ ಇಲಾಖೆಯ ಸಹಕಾರದಿಂದ ಪ್ರಸ್ತುತ ಕೆಪಿಎಸ್ ಹೊಸಯಳನಾಡು , ಹಿರಿಯೂರು ತಾಲ್ಲೂಕು ಈ ಶಾಲೆಯ ಮಹಾಪೋಷಕರು ಸಮುದಾಯದ ಸಹಕಾರದಿಂದ ಇವರ ಕಾಳಜಿ ಸಂಕಲ್ಪ ಬದ್ದತೆ ದೃಷ್ಟಿಯಿಂದ ತನ್ನ ಹುಟ್ಟೂರಿನ ಬಗ್ಗೆ ಹಾಗೂ ತಾನು ಓದಿದ ಶಾಲೆ ಬಗ್ಗೆ ಅಪಾರವಾದ ಅಭಿಮಾನ ಪ್ರೀತಿಯಿಂದ ಶಾಲೆಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು ಎಂಬ ಧೃಡಸಂಕಲ್ಪದಿಂದ ಶಾಲೆಯ ಅಭಿವೃದ್ದಿಗೆ ಪೂರಕವಾದ ಅಂಶಗಳ ಸೌಲಭ್ಯಗಳನ್ನು ಒದಗಿಸಿಕೊಟ್ಟು ದಾನಿಗಳ ಸಹಾಯದಿಂದ ಶಾಲಾ ಕೊಠಡಿಗಳು ನಿರ್ಮಾಣವಾದವು, ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಹಾಗೂ ದಾಖಲಾತಿ ಹೆಚ್ಚಳ ಮಾಡುವ ಪ್ರಯುಕ್ತ ಈ ಕೆಳಕಂಡ ಮೂಲಭೂತ ಸೌಲಭ್ಯಗಳನ್ನು ಹೊಸ ಯಳನಾಡು ಶಾಲೆಗೆ ಒದಗಿಸಿಕೊಡಲಾಗಿದೆ.

- ಪ್ರೇರಣ ಸಭಾಂಗಣ ಸುಮಾರು ಮೂವತ್ತು ರಿಂದ ನಲವತ್ತು ಲಕ್ಷಗಳಲ್ಲಿ ಶ್ರೀಯುತ ನಾ ತಿಪ್ಪೇಸ್ವಾಮಿಯು ತಂದೆ ತಾಯಿಯ ಸ್ಮರಣಾರ್ತವಾಗಿ ಕಟ್ಟಿಸಿ ಕೊಟ್ಟಿದ್ದಾರೆ. ಶಾಲಾ

ಸಭಾಂಗಣ ನಿರ್ಮಾಣ ನಾಲ್ಕು ಕೋಟಿ ವೆಚ್ಚದಲ್ಲಿ ಶ್ರೀಮತಿ ಸುಧಾ ಮೂರ್ತಿ ಇನ್‌ಫೋಸಿಸ್, ಬೆಂಗಳೂರು ಯವರು ನಿರ್ಮಾಣ ಮಾಡಿಕೊಟ್ಟಿದ್ದಾರೆ





- ಸುಸಜ್ಜಿತ ಕೊಠಡಿ ಮತ್ತು 100 ಕಂಪ್ಯೂಟರ್ ಗಳನ್ನು ಹೊಂದಿದ್ದು ವಿದ್ಯಾರ್ಥಿಗಳಿಗೆ ಗುಣ ಮಟ್ಟದ ತಾಂತ್ರಿಕ ಶಿಕ್ಷಣ ನೀಡುತ್ತಿದೆ.






- ಪ್ರತಿವರ್ಷ ಎಲ್ ಕೆ ಜಿ ಮತ್ತು ಯುಕೆಜಿ ಮಕ್ಕಳಿಗೆ ಸ್ಕೂಲ್ ಕಿಟ್ಟು ವಿತರಣೆ ಮತ್ತು ಲ್ಯಾಬ್ ನಿರ್ಮಾಣ ಒಂದರಿಂದ 12ನೇ ತರಗತಿಯವರೆಗೆ ಉಚಿತ ನೋಟ್ ಬುಕ್ ಮತ್ತು ಬ್ಯಾಂಕ್ ವಿತರಣೆ ಮಾಡಲಾಗುತ್ತದೆ.



- ವಿವಿಧ ಹಳ್ಳಿಗಳಿಂದ/ಊರುಗಳಿಂದ ಬರುವ ಶಾಲಾ ವಿದ್ಯಾರ್ಥಿಗಳಿಗಾಗಿ 4 ಬಸ್‌ಗಳನ್ನು ದಾನಿಗಳಿಂದ ಪಡೆದು, ಮಕ್ಕಳ ಶೈಕ್ಷಣಿಕ ಕಲಿಕೆಗೆ ಸಹಾಯವಾಗಿರುವುದು.



- ದಾನಿಗಳ ನೆರವಿನಿಂದ ಬ್ಯಾಸ್ಕೆಟ್ಬಾಲ್ ಅಂಕಣ ಸೈಕಲ್ ಸ್ಟ್ಯಾಂಡ್ ನಿರ್ಮಾಣ ಶಾಲಾ ಕಾಂಪೌಂಡ್ ನಿರ್ಮಾಣ.





- ಉಚಿತ  ಎಸ್.ಸಿ/ಎಸ್‌ಟಿ ವಿದ್ಯಾಥಿಗಳಿಗೆ ಕೋಚಿಂಗ್ ಪಿಯುಸಿ ಮಕ್ಕಳಿಗೆ ಪ್ರತಿ ವರ್ಷ ನಡೆಯುತ್ತದೆ. ಪ್ರತಿವರ್ಷ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಮಕ್ಕಳಿಗೆ ಪ್ರತಿಶತ  89 ರಿಂದ 90 ಪರ್ಸೆಂಟ್ ಫಲಿತಾಂಶ ಪಡೆಯಲಾಗಿದೆ.





- ಜಿಮ್ ಸೌಲಭ್ಯ ಎಸ್ ಡಿಎಂಸಿ ಮತ್ತು ಅಧ್ಯಾಪಕರ ಸಭೆಯ ಸಭಾಂಗಣ.



- ಸೈನ್ಸ್ ಪಾರ್ಕ್ ನಿರ್ಮಾಣ ಪ್ರಯೋಗಾಲಯ ನಿರ್ಮಾಣ ಮಾಡಲಾಗಿದೆ.



- ಪ್ರತ್ಯೇಕ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಹೈಟೆಕ್ ಶೌಚಾಲಯ ನಿರ್ಮಾಣ



❖ ಕೆ.ಪಿ.ಎಸ್ ಶಾಲೆಯನ್ನು ಭೇಟಿ ಮಾಡಲು ಗಣ್ಯರ ಆಗಮನ ಮತ್ತು ವೀಕ್ಷಣೆ










ಕೆಪಿಎಸ್, ಹೊಸಯಳನಾಡು ಶಾಲೆಗೆ ಶ್ರೀಮತಿ ಬಿ.ಬಿ.ಕಾವೇರಿ, ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರೊಂದಿಗೆ ಚಿತ್ರದುರ್ಗ ಜಿಲ್ಲೆಯ ಉಪನಿರ್ದೇಶಕರು (ಆಡಳಿತ)ರವರಾದ ಶ್ರೀ ಕೆ.ರವಿಶಂಕರರೆಡ್ಡಿ, ಹಾಗೂ ಶಾಲಾ ಸಿಬ್ಬಂದಿ ವರ್ಗದವರು

**ಎಲ್.& ಟಿ. ಸಂಸ್ಥೆಯ ಸಹಕಾರದೊಂದಿಗೆ 50000 ಲೀಟರ್ ನೀರಿನ ಸಾಮರ್ಥ್ಯದ ನೀರು ಶೇಖರಣಾ ತೊಟ್ಟಿಯನ್ನು ನಿರ್ಮಿಸಿಕೊಟ್ಟಿರುವುದು.**



ದಾನಿಗಳ ಸಹಾಯದಿಂದ ಎಲ್.ಕೆ.ಜಿ./ಯು.ಕೆ.ಜಿ. ವಿದ್ಯಾರ್ಥಿಗಳಿಗೆ  ನಿರ್ಮಾಣ ಮಾಡಿರುವ ಕ್ರೀಡಾಂಗಣ





ಶಾಲೆಯಲ್ಲಿ ಸುಸಜ್ಜಿತ ಗ್ರಂಥಾಲಯ ನಿರ್ವಹಣೆ ಮಾಡಿರುವುದು



ಶಾಲೆಯ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಇಲಾಖೆ ಮತ್ತು ಸಮುದಾಯದ ಸಹಕಾರದೊಂದಿಗೆ ಹಮ್ಮಿಕೊಂಡು ಶಾಲಾಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಸಮುದಾಯ ಹಾಗೂ ಎಸ್.ಡಿ.ಎಂ.ಸಿ.ಸದ್ಯಸರು ಹಾಗೂ ಪೋಷಕರಿಗೆ , ಹಳೆಯ ವಿದ್ಯಾರ್ಥಿಗಳಿಗೆ ಮತ್ತು ಶಾಲಾದಾನಿಗಳಿಗೆ ಹಾಗೂ ಸರ್ವರಿಗೂ ಅನಂತ ಧನ್ಯವಾದಗಳು.

ವಂದನಗಳೊಂದಿಗೆ,

| ಶ್ರೀ ಎಸ್. ತಿಪ್ಪೇಸ್ವಾಮಿ | ಎಲ್. ನಾಗರಾಜಾಚಾರಿ | ಸಿ.ಈರಣ್ಣ |
|---|---|---|
| ಪ್ರಾಂಶುಪಾಲರು | ಉಪ-ಪ್ರಾಂಶುಪಾಲರು | ಮುಖ್ಯ ಶಿಕ್ಷಕರು |

ಕೆ.ಪಿ.ಎಸ್. ಹೊಸಯಳನಾಡು, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ